ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

## ಪಿಎಚ್.ಡಿ. ಪದವಿಗೆ ವಿಶೇಷಾರ್ಹತೆ ನಿಯಮದಡಿ ಅರ್ಜಿ ಆಹ್ವಾನ

## ೨೦೧೬–೧೭

**ಪರಿವಿಡಿ:**

೧. ಪಿಎಚ್.ಡಿ. ಪ್ರವೇಶ ಅರ್ಜಿ ನಮೂನೆ.

೨. ೨೦೧೬–೧೭ನೇ ಸಾಲಿನ ಪಿಎಚ್.ಡಿ. ಪ್ರವೇಶದ ವೇಳಾಪಟ್ಟಿ ಮತ್ತು ಅರ್ಜಿ ಶುಲ್ಕ ವಿವರ

**ವಿಶೇಷ ಸೂಚನೆಗಳು:**

೧. ವಿದ್ಯಾರ್ಥಿಗಳು ಅಧ್ಯಯನಕ್ಕೆ ಆಯ್ಕೆಯಾದ ಬಗೆಗೆ ಯಾವುದೇ ಮಾಹಿತಿಗಳನ್ನು ಅಂಚೆ ಮುಖಾಂತರ ರವಾನಿಸುವುದಿಲ್ಲ. ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ನಿಗದಿತ ದಿನಾಂಕಗಳಲ್ಲಿ ನೋಡಿ ಖಚಿತಪಡಿಸಿಕೊಳ್ಳುವುದು.

೨. ಕಾರಣಾಂತರಗಳಿಂದ ಆಗುವ ಬದಲಾವಣೆಗಳನ್ನು ಮೇಲಿಂದ ಮೇಲೆ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ ನೋಡಿ ಖಚಿತಪಡಿಸಿಕೊಳ್ಳುವುದು.

**ಹೆಚ್ಚಿನ ವಿವರಗಳನ್ನು ಮುಂದಿನ ಪುಟಗಳಲ್ಲಿ ನೋಡುವುದು.**

ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

## ೨೦೧೬–೧೭ನೇ ಸಾಲಿನ ಪಿಎಚ್.ಡಿ. ಪದವಿ ಪ್ರವೇಶ ಅರ್ಜಿ.

(ಭರ್ತಿ ಮಾಡುವ ಮುನ್ನ ಸೂಚನೆಗಳನ್ನು ಗಮನಿಸಿ.)

ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ

| | | | |
|---|---|---|---|
| ೦೧. | ವಿದ್ಯಾರ್ಥಿಯ ಹೆಸರು (ಎಂ.ಎ. ಅಂಕಪಟ್ಟಿಯಲ್ಲಿರುವಂತೆ) | ಕನ್ನಡ | |
| | | ಇಂಗ್ಲೀಷ್ | |
| ೦೨ | ತಂದೆ/ತಾಯಿ/ಪೋಷಕರ ಹೆಸರು | | |
| ೦೩ | ಜನ್ಮ ದಿನಾಂಕ: (ಪ್ರಮಾಣ ಪತ್ರ ಲಗತ್ತಿಸಿರಿ) **(೫೫ ವರ್ಷ ಪೂರ್ಣಗೊಂಡಿರಬೇಕು)** | | |
| ೦೪. | ಲಿಂಗ | | ಗಂಡು/ಹೆಣ್ಣು |
| ೦೫. | ವಿಳಾಸ | | **ಆಧಾರ ಕಾರ್ಡ್ ನಂ:**<br>**ದೂರವಾಣಿ ಸಂಖ್ಯೆ :**<br>**ಇ–ಮೇಲ್ :** |

| ದಿನಾಂಕ | | ತಿಂಗಳು | | ವರ್ಷ | | | | ಅಕ್ಷರಗಳಲ್ಲಿ |
|---|---|---|---|---|---|---|---|---|
| | | | | | | | | |

| | | | | | | | | | | | |
|---|---|---|---|---|---|---|---|---|---|---|---|
| ೦೬. | ಮೀಸಲಾತಿ ವಿವರ (✓ **ಗುರುತು ಮಾಡಿರಿ ಮತ್ತು ಪ್ರಮಾಣ ಪತ್ರ ಲಗತ್ತಿಸಿರಿ**) | | | | | | | | | | |
| | | ಪ.ಜಾ | ಪ.ಪಂ | ಪ್ರ–೧ | ೨–ಎ | ೨–ಬಿ | ೩–ಎ | ೩–ಬಿ | ಸಾಮಾನ್ಯ | ಅಂ.ವಿ | ಮಾ.ಸೈ |
| ೦೭. | ಸ್ನಾತಕೋತ್ತರ ಪದವಿ ಪಡೆದ ವಿಷಯ | | | | | | | | | | |

೦೮. **ಶೈಕ್ಷಣಿಕ ಅರ್ಹತೆಗಳು** (ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಲಗತ್ತಿಸಿರಿ)

| **ಕೋರ್ಸ್‌ಗಳು** | **ವಿಷಯ** | **ವರ್ಷ** | **ವಿಶ್ವವಿದ್ಯಾಲಯ** | **ಪಡೆದ ಒಟ್ಟು ಅಂಕಗಳು** | **ಶೇಕಡಾ** | **ಅಂಕಪಟ್ಟಿ ಮತ್ತು ಪ್ರಮಾಣ ಪತ್ರ ಲಗತ್ತಿಸಿದ ವಿವರ** |
|---|---|---|---|---|---|---|
| ಸ್ನಾತಕ ಪದವಿ | | | | | | |
| ಸ್ನಾತಕೋತ್ತರ ಪದವಿ | | | | | | |

| | | | |
|---|---|---|---|
| ೦೯. | ಅರ್ಜಿ ಶುಲ್ಕ ಪಾವತಿಸಿದ ವಿವರ | ಚಲನ್ ಸಂಖ್ಯೆ | |
| | | ಡಿ.ಡಿ. ಸಂಖ್ಯೆ ಮತ್ತು ಬ್ಯಾಂಕ್ | |
| | | ದಿನಾಂಕ | |

| | | | | |
|---|---|---|---|---|
| ೧೦ | ಉದ್ಯೋಗದಲ್ಲಿದ್ದರೆ ಸಂಬಂಧಿಸಿದ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಲಗತ್ತಿಸಿರಿ.<br>**(✓ ಗುರುತು ಮಾಡಿರಿ ಮತ್ತು ಪ್ರಮಾಣ ಪತ್ರ ಲಗತ್ತಿಸಿರಿ)** | ಲಗತ್ತಿಸಿದೆ | ಲಗತ್ತಿಸಿಲ್ಲ | ಉದ್ಯೋಗದಲ್ಲಿ ಇಲ್ಲ |

**ದಿನಾಂಕ:** **ಅಭ್ಯರ್ಥಿಯ ಸಹಿ**

**ಸ್ಥಳ:**

**ಸಂಬಂಧಿಸಿದ ವಿಭಾಗದ ಬಳಕೆಗಾಗಿ**

ಈ ಅರ್ಜಿಯು ವಿಭಾಗದ ಸಭೆಯಲ್ಲಿ ಸ್ವೀಕೃತವಾಗಿದೆ/ಸ್ವೀಕೃತವಾಗಿಲ್ಲ.
ಕಾರಣ ಸದರಿ ಅರ್ಜಿಯನ್ನು ಅಧ್ಯಯನಾಂಗಕ್ಕೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

**ದಿನಾಂಕ:** **ವಿಭಾಗದ ಮುಖ್ಯಸ್ಥರ ಸಹಿ ಮತ್ತು ಮೊಹರು**

**ಅಧ್ಯಯನಾಂಗದ ಬಳಕೆಗಾಗಿ**

ಈ ಅರ್ಜಿ ವಿಭಾಗದ ಸಭೆಯಲ್ಲಿ ಸ್ವೀಕೃತವಾಗಿದ್ದು, ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಗೆ ಅರ್ಹವಾಗಿರುತ್ತಾನೆ/ಳೆ.

**ವಿಷಯ ನಿರ್ವಾಹಕರ ಸಹಿ** **ನಿರ್ದೇಶಕರು, ಅಧ್ಯಯನಾಂಗ**

**ದಿನಾಂಕ:**

**ಸೂಚನೆಗಳು**

೧. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಆವರಣದ ವಿವಿಧ ವಿಭಾಗಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ನೇರವಾಗಿ ಅಧ್ಯಯನಾಂಗಕ್ಕೆ ಅರ್ಜಿ ಸಲ್ಲಿಸುವುದು.

೨. ೫೫ ವರ್ಷಗಳು ಪೂರ್ಣಗೊಂಡಿರುವವರಿಗೆ ಈ ನಿಯಮದಡಿ ಅಧ್ಯಯನ ಮಾಡಲು ಅವಕಾಶವಿರುತ್ತದೆ.

೩. ನಿಗದಿತ ವಿಷಯದಲ್ಲಿ ಸ್ನಾತಕ ಪದವಿ ನಂತರದ ಎಂ.ಎ. ಪದವಿ ಪಡೆದಿರಬೇಕು.

೪. ಅಧ್ಯಯನದ ಮೂರು ಪ್ರತಿಗಳ ಪ್ರಸ್ತಾವವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

೫. ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿದ ವಿಷಯಕ್ಕೆ ಸಂಬಂಧಿಸಿ ಪಿಎಚ್.ಡಿ. ಅಧ್ಯಯನವನ್ನು ಮುಂದುವರಿಸುವುದು/ಬೇರೊಂದು ವಿಷಯದಲ್ಲಿ ಕ್ಷೇತ್ರ ತಜ್ಞತೆ ಇದ್ದಲ್ಲಿ ಸಂಬಂಧಿಸಿದ ವಿಷಯವನ್ನು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒಳಪಡಿಸಿ ಅಧ್ಯಯನ ಮುಂದುವರಿಸುವುದು.

೬. ಒಬ್ಬ ವಿದ್ಯಾರ್ಥಿ ಒಂದು ವಿಭಾಗಕ್ಕೆ ಮಾತ್ರ ಅರ್ಜಿ ಸಲ್ಲಿಸುವುದು.

೭. ಅಪೂರ್ಣ ವಿವರಗಳುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೮. ತಪ್ಪು ಮಾಹಿತಿ/ಸುಳ್ಳು ದಾಖಲೆ ನೀಡಿ ಪ್ರವೇಶ ಪಡೆದಲ್ಲಿ ಅದರಿಂದ ಉದ್ಭವಿಸುವ ಯಾವುದೇ ರೀತಿಯ ಸಮಸ್ಯೆಗಳಿಗೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.

ಅಧ್ಯಯನಾಂಗ

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

# ಪಿಎಚ್.ಡಿ. ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ ೨೦೧೬–೧೭

| ಕ್ರ.ಸಂ. | ವಿವರ | ಅವಧಿ/ದಿನಾಂಕ |
|---|---|---|
| ೧. | ಅಧ್ಯಯನಾಂಗದಿಂದ ಅರ್ಜಿ ನೀಡಿಕೆ ಆರಂಭ | ೧೫.೧೨.೨೦೧೬ |
| ೨. | ಭರ್ತಿ ಮಾಡಿದ ಅರ್ಜಿಗಳನ್ನು ಪ್ರಸ್ತಾವದೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | ೦೫.೦೧.೨೦೧೭ |

**೧. ಪ್ರವೇಶ ಅರ್ಜಿ ಶುಲ್ಕ: ರೂ. ೬೦೦.೦೦** (ಪ.ಜಾ/ಪ.ಪಂ. ಹಾಗೂ ಪ್ರ–೧ರ ವಿದ್ಯಾರ್ಥಿಗಳಿಗೆ ಶೇ.೫೦% ರಿಯಾಯಿತಿ ಇರುತ್ತದೆ.)

ಕೋರ್ಸ್‌ಗಳ ಪ್ರವೇಶ ಅರ್ಜಿಯನ್ನು ನೇರವಾಗಿ ಪಡೆಯುವ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಶುಲ್ಕ ಪಾವತಿಸಿ ಅಧ್ಯಯನಾಂಗದಲ್ಲಿ ಪ್ರವೇಶ ಅರ್ಜಿಯನ್ನು ಪಡೆದು ಮೂರು ಪ್ರತಿಗಳ ಪ್ರಸ್ತಾವದೊಂದಿಗೆ ಸಲ್ಲಿಸಬೇಕು.

**ಅಥವಾ**

ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kannadauniversity.org**ನಿಂದ ಪ್ರವೇಶ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಭರ್ತಿಮಾಡಿದ ಅರ್ಜಿಯನ್ನು ಮೂರು ಪ್ರತಿಗಳ ಪ್ರಸ್ತಾವದೊಂದಿಗೆ ಮತ್ತು ಶುಲ್ಕದ ಡಿ.ಡಿ.ಯನ್ನು **ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ** ಇವರ ಹೆಸರಿಗೆ **(ಹೊಸಪೇಟೆಯ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಥವಾ ಬ್ಯಾಂಕ್ ಆಫ್ ಇಂಡಿಯಾ, ಕಮಲಾಪುರ, ಬಳ್ಳಾರಿ ಜಿಲ್ಲೆ, ಇಲ್ಲಿ ಪಾವತಿಯಾಗುವಂತೆ)** ಪಡೆದು, **ನಿರ್ದೇಶಕರು, ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬,** ಇವರ ಹೆಸರಿಗೆ ಸಲ್ಲಿಸಬೇಕು.

ಹೆಚ್ಚಿನ ವಿವರಗಳನ್ನು **ಕನ್ನಡ ವಿಶ್ವವಿದ್ಯಾಲಯದ www.kannadauniversity.orgವೆಬ್‌ಸೈಟ್ ಅಥವಾ ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩ ೨೭೬ ಅಥವಾ ದೂರವಾಣಿ: ೦೮೩೯೪–೨೪೧೪೬೪** ಮೂಲಕ ಪಡೆಯಬಹುದಾಗಿದೆ.

/–

ನಿರ್ದೇಶಕರು

ಅಧ್ಯಯನಾಂಗ

ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

# ಪಿಎಚ್.ಡಿ. ಪದವಿಗೆ ವಿಶೇಷಾರ್ಹತೆ ನಿಯಮ

## ೧. ಪ್ರವೇಶಾರ್ಹತೆ

ಕನ್ನಡ ನಾಡು, ಸಂಸ್ಕೃತಿ, ಭಾಷೆ, ಕಲೆ, ವಿಜ್ಞಾನ, ಅಭಿವೃದ್ಧಿ, ಸಮಾಜ, ಚರಿತ್ರೆ ಕುರಿತಂತೆ ಅಧ್ಯಯನಗಳನ್ನು ಕನ್ನಡ ವಿಶ್ವವಿದ್ಯಾಲಯವು ಪ್ರೋತ್ಸಾಹಿಸುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಅಪೇಕ್ಷಿಸುವ ಹಿರಿಯ ವಿದ್ವಾಂಸರಿಗೆ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶವನ್ನು ವಿಶ್ವವಿದ್ಯಾಲಯ ಹೊಂದಿದೆ.

ಈ ಅವಕಾಶ ಕಲ್ಪಿಸಿಕೊಡುವ ಉದ್ದೇಶವೇನೆಂದರೆ ಕನ್ನಡ ವಿಶ್ವವಿದ್ಯಾಲಯ ಶಿಕ್ಷಣ, ಅಧ್ಯಯನ, ಸಂಶೋಧನೆಗಳಿಗೆ ಔಪಚಾರಿಕ, ಸಾಂಪ್ರದಾಯಿಕ ನೆಲೆಗಳಿಂದಾಚೆ ಉಳಿದಿರುವ ತಜ್ಞತೆ, ಕೌಶಲ್ಯ, ಬೌದ್ಧಿಕತೆಯನ್ನು ಗೌರವಿಸುವ ಹಾಗೂ ಅಸಂಪ್ರದಾಯಿಕವಾದ ತಿಳುವಳಿಕೆಗಳನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಧಿಯಲ್ಲಿ ತಂದು ನಾಡಿಗೆ ಉಪಯುಕ್ತವಾಗುವಂತೆ ಬಳಸಿಕೊಳ್ಳುವ ಉದ್ದೇಶದಿಂದ ವಿಶೇಷ ಅಧ್ಯಯನ ಯೋಜನೆಗಳನ್ನು ರೂಪಿಸಲು ಉದ್ದೇಶಿಸಿದೆ.

ಈ ಅಧ್ಯಯನಗಳಿಗೆ ಅಧ್ಯಯನಕಾರರಿಗೆ 'ಪಿಎಚ್.ಡಿ.' ಪದವಿ ನೀಡಬಹುದಾಗಿದೆ. ಇದಕ್ಕಾಗಿ ವಿಶೇಷ ಪಿಎಚ್.ಡಿ. ನಿಯಮಾವಳಿಯನ್ನು ರೂಪಿಸಿದೆ. ಈ ವಿಶೇಷ ನಿಯಮಾವಳಿ ಜೊತೆಗೆ ಪಿಎಚ್.ಡಿ. ಪದವಿಗೆ ಸಂಬಂಧಿಸಿದ ಕನಿಷ್ಠ ಗುಣಮಟ್ಟ ಹಾಗೂ ಪ್ರಕ್ರಿಯೆ ನಿಯಮಗಳು, ೨೦೦೯ (Minimum Standards and procedure for Award of Ph.D. Degree Regulation 2009)ರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು/ಪ್ರಕ್ರಿಯೆಗಳನ್ನು ಒಳಗೊಂಡಂತೆ **ಈ ಕೆಳಗೆ ಸೂಚಿಸಿದ ನಿಯಮಗಳನ್ನು ರೂಪಿಸಿಕೊಳ್ಳಲು ದಿನಾಂಕ: ೦೨.೦೯.೨೦೧೬ ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನ್ ಸಮಿತಿ ಸಭೆಯು ನಿರ್ಣಯಿಸಿ ಅನುಮೋದನೆ ನೀಡಿದೆ.**

## ಪ್ರವೇಶಾರ್ಹತೆಗಳು

೧. ೫೫ ವರ್ಷಗಳ ಮೇಲ್ಪಟ್ಟವರಿಗೆ ಈ ನಿಯಮದಡಿ ಅಧ್ಯಯನ ಮಾಡಲು ಅವಕಾಶವಿರುತ್ತದೆ.

೨. ನಿಗದಿತ ವಿಷಯದಲ್ಲಿ ಸ್ನಾತಕ ಪದವಿ ನಂತರದ ಎಂ.ಎ. ಪದವಿ ಪಡೆದಿರಬೇಕು.

೩. ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಸರಿಯಾಗಿ ಅಭ್ಯರ್ಥಿಗೆ ೫೫ ವರ್ಷಗಳು ಪೂರ್ಣಗೊಂಡಿರಬೇಕು.

೪. ವಿದೇಶಿ ವಿದ್ಯಾರ್ಥಿಗಳು (ಸಂಬಂಧಿಸಿದ ರಾಯಭಾರಿ ಕಛೇರಿಯಿಂದ ಪ್ರಾಯೋಜಿತ) ಮತ್ತು ಪ್ರಾಯೋಜಿತ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ. ೫೫ ಅಂಕ ಪಡೆದ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

೫. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–೧/ಅಂಗವಿಕಲ ವಿದ್ಯಾರ್ಥಿಗಳು ಮತ್ತು ಮಾರ್ಚ್ ೩೧, ೧೯೯೨ರ ಪೂರ್ವದಲ್ಲಿ ಖಾಯಂ ಆಗಿ ನಿಯಮಾನುಸಾರ ನೇಮಕಗೊಂಡು ಪದವಿ ಕಾಲೇಜು ಹಾಗೂ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರು, ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಸಿಬ್ಬಂದಿ ಕನಿಷ್ಠ ೫೦ ಅಂಕಗಳನ್ನು ಸ್ನಾತಕೋತ್ತರ ಪದವಿಯಲ್ಲಿ ಪಡೆದಿದ್ದರೆ ಪಿಎಚ್.ಡಿ. ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ ಅರ್ಜಿ ಸಲ್ಲಿಸುವಂತಹ ನೌಕರರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸೇವೆಯಲ್ಲಿರುವುದು ಕಡ್ಡಾಯ.

೬. ಸ್ನಾತಕೋತ್ತರ ಪದವಿಯ ಫಲಿತಾಂಶವನ್ನು ವಿದ್ಯಾರ್ಥಿಯ ಅಂಕಪಟ್ಟಿಯಲ್ಲಿ ಗ್ರೇಡ್/ಕ್ರೆಡಿಟ್ಸ್/ಸಂಗ್ರಹಿತ ಬಿಂದುಗಳ ರೂಪದ ಮೂಲಕ ಘೋಷಣೆ ಮಾಡಿದ್ದರೆ ಅದನ್ನು ಶೇಕಡಾವಾರು ಅಂಕಕ್ಕೆ ಪರಿವರ್ತಿಸಿಕೊಂಡು ನಿಯಮ ೪.೧ ಮತ್ತು ೪.೨ ರನ್ವಯ ಪ್ರವೇಶದ ಅರ್ಹತೆಯನ್ನು ನಿರ್ಧರಿಸಬೇಕು.

## ಪ್ರವೇಶ ಮಾನದಂಡಗಳು

೧. ಕ್ರಮವಾಗಿ ಈ ಮೇಲಿನ ಶೈಕ್ಷಣಿಕ ಅರ್ಹತೆಯುಳ್ಳಂತ ವ್ಯಕ್ತಿಗಳು ನಿರ್ದಿಷ್ಟ ಕ್ಷೇತ್ರದಲ್ಲಿ ಹೊಂದಿದ ತಿಳುವಳಿಕೆ ಹಾಗೂ ನೀಡಿದ ಕೊಡುಗೆಯನ್ನು ವಿಶ್ವವಿದ್ಯಾಲಯಕ್ಕೆ ಪ್ರಸ್ತಾವ ಸಲ್ಲಿಸುವ ಸಂದರ್ಭದಲ್ಲಿ ಮನವರಿಕೆ ಮಾಡಿಕೊಡಬೇಕು. ಅಧ್ಯಯನಕಾರರು ಸ್ವತಂತ್ರವಾಗಿ ಅಧ್ಯಯನ ಮಾಡಲು ಸಮರ್ಥರು ಮತ್ತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಈಗಾಗಲೇ ಗಣನೀಯ ಸಾಧನೆಗಳನ್ನು ಮಾಡಿದ್ದಾರೆ ಎಂಬ ಬಗೆಗೂ ಪೂರ್ವಭಾವಿ ಪರಿಶೀಲನೆಯ ಲಿಖಿತ ಹಾಗೂ ಪ್ರಯೋಗ ರೂಪದ ವರದಿಗಳನ್ನು ಪರಿಶೀಲಿಸುವುದು.

೨. ಪಿಎಚ್.ಡಿ. ಪ್ರಸ್ತಾವವು ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವಗಳ ಕುರಿತು ಸ್ಪಷ್ಟ ವಿವರಗಳಿಂದ ಕೂಡಿದ ೫೦ ಪುಟಗಳ ವ್ಯಾಪ್ತಿಯನ್ನು ಹೊಂದಿರಬೇಕು. ಅಧ್ಯಯನಕಾರರಿಗೆ ಅಗತ್ಯವಾದ ಅರ್ಹತೆ ಹಾಗೂ ಆಳವಾದ ಸಿದ್ಧತೆ ಇದೆ ಎಂಬುದನ್ನು ಖಚಿತವಾಗಿ ಆ ಪ್ರಸ್ತಾವದಿಂದ ಮನವರಿಕೆಯಾಗಬೇಕು. ಅಂಥ ಪ್ರಸ್ತಾವದ ಎಂಟು ಪ್ರತಿಗಳನ್ನು ಅಧ್ಯಯನಾಂಗಕ್ಕೆ ಸಲ್ಲಿಸಬೇಕು.

೩. ಅಧ್ಯಯನಾಂಗದ ನಿರ್ದೇಶಕರು, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಡೀನ್ ಸಮಿತಿ ಸಭೆಯಲ್ಲಿ ಸಂಬಂಧಿಸಿದ ಅಧ್ಯಯನಕಾರು ಸಲ್ಲಿಸಿದ ಪ್ರಸ್ತಾವವನ್ನು ಮಂಡಿಸಬೇಕು. ಸಮಿತಿ ಶಿಫಾರಸ್ಸು ಮಾಡಿದ ಪ್ರಸ್ತಾವವನ್ನು ಸಲಹಾ ಸಮಿತಿಯು ಸೂಚಿಸುವ ಇಬ್ಬರು ಬಾಹ್ಯ ತಜ್ಞರಿಗೆ ಕಳುಹಿಸಿ ಅಧ್ಯಯನಾಂಗವು ಮೌಲ್ಯಮಾಪನ ಮಾಡಿಸುತ್ತದೆ. ಅಧ್ಯಯನಾಂಗದ ಸಲಹಾ ಸಮಿತಿ ಈ ಕೆಳಗಿನಂತಿರುತ್ತದೆ.

| | | |
|---|---|---|
| **೧. ಮಾನ್ಯ ಕುಲಪತಿಗಳು** | : | **ಅಧ್ಯಕ್ಷರು** |
| **೨. ಆಯಾ ನಿಕಾಯದ ಡೀನ್‌ರು** | : | **ಸದಸ್ಯರು** |
| **೩. ವಿಭಾಗದ ಮುಖ್ಯಸ್ಥರು** | : | **ಸದಸ್ಯರು** |
| **೪. ಅಧ್ಯಯನಾಂಗದ ನಿರ್ದೇಶಕರು** | : | **ಸದಸ್ಯ ಸಂಚಾಲಕರು** |

೪. ಪ್ರಸ್ತಾವವು ಮೌಲ್ಯಮಾಪಕರ ಶಿಫಾರಸ್ಸು ಪಡೆದ ಮೇಲೆ ತಜ್ಞ ಸಮಿತಿಯ ಮುಂದೆ ಸದರಿ ಅಧ್ಯಯನಕಾರರು ವಿಶ್ವವಿದ್ಯಾಲಯ ನಿಗದಿಪಡಿಸಿದ ದಿನಾಂಕದಂದು ತಮ್ಮ ಅಧ್ಯಯನದ ಅಗತ್ಯವನ್ನು ಮಂಡಿಸಬೇಕಾಗುತ್ತದೆ. ಅಗತ್ಯವಿದ್ದಲ್ಲಿ ಸಲಹಾ ಸಮಿತಿಯು ಬಾಹ್ಯ ವಿಷಯ ತಜ್ಞರನ್ನು ಆಹ್ವಾನಿಸಬಹುದು. ಈ ಸಮಿತಿಯು ಒಪ್ಪಿಗೆ ನೀಡಿದ ಮೇಲೆ ಪಿಎಚ್.ಡಿ. ಅಧ್ಯಯನಕ್ಕೆ ನೋಂದಣಿ ನೀಡಲು ಅಧ್ಯಯನಾಂಗವು ಕುಲಪತಿಯವರ ಅನುಮೋದನೆಯೊಂದಿಗೆ ಕ್ರಮವಹಿಸುತ್ತದೆ.

೫. ಆಯ್ಕೆಯಾದ ಅಧ್ಯಯನಕಾರರ ವಿಷಯ ಪರಿಣಿತಿಗನುಗುಣವಾಗಿ ಮಾನ್ಯ ಕುಲಪತಿಗಳು ಅಧ್ಯಯನಕಾರರ ಹೆಸರನ್ನು ಯಾವ ವಿಭಾಗದಲ್ಲಿ ನೋಂದಾವಣಿಗೆ ಅವಕಾಶ ಮಾಡಬೇಕೆಂಬುದನ್ನು ಸೂಚಿಸಬೇಕು.

೬. ನೋಂದಣಿಯನ್ನು ನೀಡುವ ಅಥವಾ ನೀಡದಿರುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಇರುತ್ತದೆ. ವಿಶ್ವವಿದ್ಯಾಲಯದಲ್ಲಿ ಒಂದು ಬಾರಿಗೆ ಪ್ರತಿ ನಿಕಾಯದಲ್ಲಿ ಐದಕ್ಕಿಂತ ಹೆಚ್ಚು ಪಿಎಚ್.ಡಿ. ನೋಂದಣಿ ನೀಡುವಂತಿಲ್ಲ. ಐದರಲ್ಲಿ ಸ್ಥಾನ ತೆರವಾದಂತೆ ಕ್ರಮವಾಗಿ ಅದನ್ನು ತುಂಬಿಕೊಂಡು ಹೋಗಬೇಕು.

೭. ಆಯ್ಕೆಯಾದ ಅಭ್ಯರ್ಥಿಯು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮದನ್ವಯ ಕೋರ್ಸ್‌ವರ್ಕ್, ಖಾಯಂ ನೋಂದಣಿ ಪೂರ್ವ ಕಲೋಕ್ವಿಯಂನಲ್ಲಿ ಭಾಗವಹಿಸಬಹುದು. ಒಂದು ಪಕ್ಷ ಭಾಗವಹಿಸದಿದ್ದಲ್ಲಿ ಮೂರು ಸಂಶೋಧನಾ ಲೇಖನಗಳನ್ನು ಬರೆದು ಮಾನ್ಯ ಕುಲಪತಿಗಳು ಸೂಚಿಸುವ ತಜ್ಞರಿಗೆ ಕಳುಹಿಸಿ ಮೌಲ್ಯಮಾಪನ ಮಾಡಿಸಿ ವರದಿ/ಅಂಕಗಳ ಆಧಾರದ ಮೇಲೆ ಖಾಯಂ ನೋಂದಣಿಗೆ ಅವಕಾಶ ಕಲ್ಪಿಸಲಾಗುವುದು.

೮. ಉಳಿದಂತೆ ಶುಲ್ಕ ಪಾವತಿ, ಪ್ರಬಂಧ ಸಲ್ಲಿಕೆ, ಪದವಿ ಪ್ರದಾನ ಪರೀಕ್ಷಾ ಪ್ರಕ್ರಿಯೆಗಳು ಸಾಮಾನ್ಯ ಪಿಎಚ್.ಡಿ. ನಿಯಮಗಳಂತೆ ಅನ್ವಯಿಸುತ್ತವೆ.

೯. ಮಾರ್ಗದರ್ಶಕರ ನಿಯೋಜನೆಯನ್ನು ವಿಶ್ವವಿದ್ಯಾಲಯ ನಿಗದಿಪಡಿಸುವುದು.

/-

**ಕುಲಸಚಿವರು**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ವಿದ್ಯಾರಣ್ಯ – 583 276**

## ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ಮೂಲಕ ನಡೆಯುವ ವಿವಿಧ ಕೋರ್ಸ್‌ಗಳ ಶುಲ್ಕ ವಿವರ – 2016–17

**(ದಿನಾಂಕ: 09.08.2016ರಂದು ನಡೆದ 185ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದೆ.)**

### ಪಿಎಚ್.ಡಿ. ಶುಲ್ಕ ವಿವರ

| ಕ್ರ.ಸಂ. | ಶುಲ್ಕ ವಿವರ | ಮೊತ್ತ |
|---|---|---|
| 1. | ಅರ್ಜಿ ಶುಲ್ಕ (ತೆರಿಗೆ ಸಹಿತ) | 600.00 |
| 2. | ತಾತ್ಕಾಲಿಕ ನೊಂದಣಿ ಶುಲ್ಕ | 1100.00 |
| 3. | ಕೋರ್ಸ್‌ವರ್ಕ್ ಶುಲ್ಕ (ಅಂಕಪಟ್ಟಿ ಶುಲ್ಕ ಸೇರಿ) | 2500.00 |
| 4. | ಅರ್ಧವಾರ್ಷಿಕ ಅಧ್ಯಯನ ಶುಲ್ಕ (ಆರು ತಿಂಗಳಿಗೊಮ್ಮೆ) | 3000.00 |
| 5. | ಅವಧಿ ವಿಸ್ತರಣಾ ಶುಲ್ಕ (ಒಂದು ಅವಧಿ ವಿಸ್ತರಣೆ ಮತ್ತು ಅರ್ಧವಾರ್ಷಿಕ ಶುಲ್ಕ ಪ್ರತ್ಯೇಕ) **(ಅವಧಿ ವಿಸ್ತರಣಾ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.)** | 6000.00 |
| 6. | ಪ್ರಬಂಧ ಸಲ್ಲಿಕೆ ಶುಲ್ಕ | 7000.00 |
| 7. | ಮರು ನೋಂದಣಿ ಶುಲ್ಕ | 3500.00 |
| 8. | ಪ್ರಬಂಧ ಮರು ಸಲ್ಲಿಕೆ ಶುಲ್ಕ | 3500.00 |
| 9. | ಘಟಿಕೋತ್ಸವ ಶುಲ್ಕ | 1500.00 |
| 10. | ಮೌಲ್ಯಮಾಪನ ವರದಿ ಶುಲ್ಕ | 1000.00 |
| 11. | ಪ್ರಬಂಧ ಪ್ರಕಟಣೆಯ ಅನುಮತಿ ಶುಲ್ಕ | 1500.00 |
| 12. | ಗ್ರಂಥಾಲಯ ಶುಲ್ಕ | 1100.00 |
| 13. | ಪಿಎಚ್.ಡಿ. ಕೋರ್ಸ್‌ವರ್ಕ್ ಅಂಕಪಟ್ಟಿ/ಅಧಿಸೂಚನೆ/ಪ್ರಮಾಣಪತ್ರ ತಿದ್ದುಪಡಿ/ಪರಿಷ್ಕೃತ ಶುಲ್ಕ | 500.00 |
| 14. | ಪಿಎಚ್.ಡಿ. ಅಧಿಸೂಚನೆ/ಪ್ರಮಾಣಪತ್ರ ನಕಲು ಪ್ರತಿ ಪಡೆಯುವ ಶುಲ್ಕ | 1500.00 |
| 15. | ಅಧ್ಯಯನ ಶುಲ್ಕ ವಿಳಂಬ ಪಾವತಿಯ ದಂಡ (ಒಂದು ಅವಧಿಗೆ) | 1000.00 |

/–

**ನಿರ್ದೇಶಕರು, ಅಧ್ಯಯನಾಂಗ**